ಆ) ಡಿಸೆಂಬರ್96 ರಲ್ಲಿ ಕೇಂದ್ರ ಸರ್ಕಾರದ ಪಾಲಿನ ಹಣ ಮುಜೂರಾಗಿದ್ದು, ಶೀಘ್ರದಲ್ಲಿ ಅರ್ಹ ಸಹಕಾರ ಸಂಘಗಳಿಗೆ ಹಣ ಬಿಡುಗಡೆ ಮಾಡಲಾಗುವುದು.

ಇ) ಇಂಥ ಸಹಕಾರ ಸಂಘಗಳನ್ನು ಸಶಕ್ತಗೊಳಿಸಲು ಸರ್ಕಾರ ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ.

ಗಂಗಾ ಕಲ್ಯಾಣ ಯೋಜನೆ.

820 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಗಂಗಾ ಕಲ್ಯಾಣ ಯೋಜನೆಯನ್ನು ಕೈಗೊಳ್ಳಲಾಗಿದೆ? (ತಾಲ್ಲೂಕು ವಿವರ ನೀಡುವುದು)

ಶ್ರೀ. ಕೆ.ಎಂ. ಕೃಷ್ಣಾ ರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಳ್ಳಲಾದ ಯೋಜನೆಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ :-

ಕ್ರ. ಸಂ	ತಾಲ್ಲೂಕು	ಘಟಕ ಗಳ ಸಂಖ್ಯೆ	ಫಲಾನು ಭವಿಗಳ ಸಂಖ್ಯೆ	ಫಲಾನು ಸಫಲ ಬಾವಿಗಳ ಸಂಖ್ಯೆ	ನೀರಿನ ಸೌಲಭ್ಯ ಪಡೆದ ಜಮೀನಿನ ವಿಸ್ತೀರ್ಣ ಎಕರೆ/ ಗುಂಟೆ
1)	ತುಮಕೂರು	7	42	11	75.26
2)	ಶಿರಾ	23	85	30	282.06
3)	ಮಧುಗಿರಿ	11	44	19	132.18
4)	ಚಿಕ್ಕನಾಯಕನಹಳ್ಳಿ	13	46	18	139.07
5)	ಕೊರಟಗೆರೆ	17	71	29	200.14
	ಒಟ್ಟು	**71**	**288**	**107**	**829.31**

ಗದಗ್-ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ಯೋಜನೆ

821 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ-ಬೆಟಗೇರಿ ನಗರದ ನೀರು ಸರಬರಾಜು ಸುಧಾರಿಸಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮುಂದೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಮುಂದಿನ ಹಣಕಾಸು ವರ್ಷದಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಂಡು ಪೂರ್ತಿಗೊಳಿಸಲು ಕ್ರಮ ಕೈಗೊಳ್ಳುವಿರಾ?

ಈ) ಅದಕ್ಕಾಗಿ ಬೇಕಾಗಿರುವ ಹಣವೆಷ್ಟು?

ಉ) ಅದನ್ನು ಯಾವ ಯಾವ ಮೂಲದಿಂದ ತರಲಾಗುವುದು?

ಶ್ರೀ. ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಅಂದಾಜು ಪಟ್ಟಿಯು ಮಂಡಳಿಯಿಂದ ಬಂದ ನಂತರ ಸರ್ಕಾರವು ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಆದಷ್ಟು ಶೀಘ್ರವಾಗಿ.

ಈ) ವಿವರವಾದ ಅಂದಾಜು ಪಟ್ಟಿ ತಯಾರಾದ ನಂತರವೇ ಇದು ಗೊತ್ತಾಗುವುದು.

ಉ) ಹುಡ್ಕೋ/ಎಲ್.ಐ.ಸಿ.

ಗದಗ ವಿಧಾನಸಭಾ ಕ್ಷೇತ್ರಕ್ಕೆ ವಸತಿಶಾಲೆ ಮಂಜೂರಾತಿ

823 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾರಂಭಿಸಿದ ವಸತಿಶಾಲೆಗಳೆಷ್ಟು? (ಪ್ರದೇಶಗಳ ಸಂಪೂರ್ಣ ವಿವರ ನೀಡುವುದು).

ಆ) ಮುಂದಿನ ಹಣಕಾಸು ವರ್ಷದಲ್ಲಿ ಪ್ರಾರಂಭಿಸುವ ವಸತಿ ಶಾಲೆಗಳೆಷ್ಟು?

ಇ) ಇದಕ್ಕಾಗಿ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು?

ಈ) ಈ ಯೋಜನೆಯಡಿ ಗದಗ ವಿಧಾನಸಭೆ ಕ್ಷೇತ್ರದ ಜನಗಳ ಅನುಕೂಲಕ್ಕಾಗಿ ಒಂದು ವಸತಿಶಾಲೆಯನ್ನು ಮುಂದಿನ ಹಣಕಾಸು ವರ್ಷದಲ್ಲಿ ಪ್ರಾರಂಭಿಸುವಿರಾ?

ಶ್ರೀ. ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :